ಅಧ್ಯಕ್ಷರು: ತಾವು ಹೇಳಿ.....

(ಗೊಂದಲ)

ಶ್ರೀ ಆರ್.ಅಶೋಕ್: ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಎಂದು ಸೈನ್ ಮಾಡಿರುವ ಉತ್ತರ ಬಂದಿದೆ.

ಅಧ್ಯಕ್ಷರು: ಇದರಲ್ಲಿ ಸ್ವಲ್ಪ ಕನ್‌ಫ್ಯೂಶನ್ ಇದೆ. ಇದನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಆರ್.ಅಶೋಕ್: ನಗರಾಭಿವೃದ್ಧಿ ಇಲಾಖೆಯವರು ಸಹಿ ಮಾಡಿದ ಉತ್ತರ ಕಳಿಸಿದ್ದಾರೆ. ಆ ಇಲಾಖೆಯವರೇ ಸಹಿ ಮಾಡಿ ಕೊಟ್ಟಿರುವುದು. ಇದರಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ ಎಂದು ಇದೆ.

ಅಧ್ಯಕ್ಷರು: ಈಗ ಒಟ್ಟಿನಲ್ಲಿ ಕನ್‌ಫ್ಯೂಶನ್ ಉಂಟಾಗಿದೆ. ಒಂದು ವಾರ ಕಾಯಿರಿ. ಮುಂದಿನ ಶುಕ್ರವಾರ ಇದನ್ನು ತೆಗೆದುಕೊಳ್ಳೋಣ.

ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ತಾಲ್ಲೂಕಿನ ಬೊಕ್ಕಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ.

245(1662)

ಶ್ರೀ ಜಿ.ರಾಜು ಗೌಡ(ಹನ್ನೂರು):ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನ ಬೊಕ್ಕಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ದುರುಪಯೋಗವಾದ ಹಣ ಎಷ್ಟು?

ಆ) ದುರುಪಯೋಗ ಮಾಡಿದವರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಡಿ.ಕೆ.ಶಿವಕುಮಾರ (ಸಹಕಾರ ಸಚಿವರು):

ಅ) ಮೈಸೂರು-ಚಾಮರಾಜನಗರ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧಿಕಾರಿಗಳ ತಪಾಸಣೆ ವರದಿಯ ಪ್ರಕಾರ ಸಂಘದಲ್ಲಿ ರೂ. 1,05,783-79 ಅವ್ಯವಹಾರವಾಗಿರುವುದು ಕಂಡು ಬಂದಿರುತ್ತದೆ.

ಆ) ತಪಾಸಣೆ ವರದಿಯಲ್ಲಿ ಅವ್ಯವಹಾರ ನಡೆದಿರುವುದಾಗಿ ತಿಳಿದು

ಬಂದಿರುವುದರಿಂದ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 65ರ ರೀತ್ಯಾ ಪರಿವೀಕ್ಷಣೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಜಿ.ರಾಜುಗೌಡ:ಸ್ವಾಮಿ, ಕೊಳ್ಳೇಗಾಲ ತಾಲ್ಲೂಕು ಬೊಕ್ಕನಳ್ಳಿಯ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ 1 ಲಕ್ಷ 5 ಸಾವಿರ 783 ರೂಪಾಯಿಗಳ ಹಣ ದುರುಪಯೋಗವಾಗಿದೆ ಎನ್ನತಕ್ಕದ್ದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಯಾರಿಂದ ದುರುಪಯೋಗವಾಗಿದೆ? ಅವರ ಮೇಲೆ ತಾವು ಏನು ಕ್ರಮ ಜರುಗಿಸುತ್ತೀರಿ? ಬಹುಶಃ ತಾವು ಆ ಆಡಳಿತ ಮಂಡಳಿಯನ್ನು ಸ್ಥಗಿತಗೊಳಿಸಿ ಆಡಳಿತಾಧಿಕಾರಿಯನ್ನು ನೇಮಿಸಿದಾಗ ಇನ್ನೂ ಹೆಚ್ಚಿನ ಒಳ ವಿಷಯಗಳು ಹೊರಹೊಮ್ಮುತ್ತವೆ. ದಯಮಾಡಿ ತಾವು ಅದನ್ನು ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್: ಗೌರವಾನ್ವಿತ ಸದಸ್ಯರು ಅಲ್ಲಿ ಸ್ವಲ್ಪ ಮಿಸ್‌ಅಪ್ರೋಪ್ರಿಯೇಷನ್ ಆಗಿರುವ ಬಗ್ಗೆ ಕೇಳಿದ್ದಾರೆ, ಅಲ್ಲಿ ಸ್ವಲ್ಪ ಮಿಸ್‌ಅಪ್ರೋಪ್ರಿಯೇಷನ್ ಆಗಿದೆಯೆಂದು ನಮಗೂ ಕೂಡ ವರದಿ ಬಂದಿದೆ. ಈ ಬಗ್ಗೆ ಯಾವ ರೀತಿ ಕಾನೂನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಖಂಡಿತವಾಗಿಯೂ ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ರಾಜುಗೌಡ: ದುರುಪಯೋಗವಾಗಿರುವುದು ಕೇವಲ ಒಂದು ಲಕ್ಷ ರೂಪಾಯಿಗಳು ಅಲ್ಲ. ಇನ್ನೂ ಅನೇಕ ರೀತಿಯ ದುರುಪಯೋಗಗಳು ಆಗಿವೆ. ಕೆಲವು ಪಟ್ಟಭದ್ರಹಿತಾಸಕ್ತಿಗಳು ಅಲ್ಲಿ ಬೇರೂರಿವೆ. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಆ ಆಡಳಿತ ಮಂಡಳಿಯನ್ನು ರದ್ದುಪಡಿಸತಕ್ಕದ್ದು ಮತ್ತು ಆಡಳಿತಾಧಿಕಾರಿಯನ್ನು ನೇಮಿಸಿದರೆ ಹೆಚ್ಚಿನ ಒಳವಿಷಯಗಳು ತಮಗೆ ಗೊತ್ತಾಗುತ್ತವೆ. ಸಾರ್ವಜನಿಕರಿಗೆ ಒಳ್ಳೆಯದನ್ನು ಮಾಡಬೇಕು ಎಂಬ ಉದ್ದೇಶ ತಮಗೆ ಇದ್ದರೆ ದಯಮಾಡಿ ಇದನ್ನು ತಾವು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್: ಖಂಡಿತವಾಗಿಯೂ ಕಾನೂನಿನಲ್ಲಿ ಯಾವರೀತಿ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತದೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್.ಸಿ.ಬಸವರಾಜು: ಮಾನ್ಯ ಅಧ್ಯಕ್ಷರೆ, ಇನ್ನು ಎಷ್ಟು ದಿವಸಗಳಲ್ಲಿ ಈ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ? ಅವರು ಹೇಳಿದ ಹಾಗೆ ಅನೇಕ ಸಹಕಾರ ಸಂಘಗಳಲ್ಲಿ ಇದೇ ರೀತಿಯಾಗಿ ಅವ್ಯವಹಾರಗಳು ನಡೆದಿವೆ. ನೀವು ಕಾಲಮಿತಿಯನ್ನು ಹಾಕಿಕೊಂಡು ಇದರ ಬಗ್ಗೆ ವಿಚಾರಣೆ ನಡೆಸದೇ ಇದ್ದರೆ ಬಹಳ ತೊಂದರೆಯಾಗುತ್ತದೆ, ಸೊಸೈಟಿಗಳು ಮುಳುಗಿಹೋಗುತ್ತಿವೆ. ಆದ್ದರಿಂದ, ಮಾನ್ಯ ಸಚಿವರು ಒಂದು ಕಾಲಮಿತಿಯನ್ನು ಹಾಕಿಕೊಂಡು ಕೂಡಲೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್: ಇದರ ಬಗ್ಗೆ ಪರಿಶೀಲನೆ ಮಾಡೋಣ.

ಕೊಳಚೆ ನಿರ್ಮೂಲ ಮಂಡಳಿಯ ವತಿಯಿಂದ ಜನರಿಗಾಗಿ ವಸತಿ ಸೌಲಭ್ಯ.

332(2061)

ಶ್ರೀ ತಮ್ಮಣ್ಣ ಡಿ.ಸಿ.(ಕಿರುಗಾವಲು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಕೊಳಚೆ ನಿರ್ಮೂಲನಾ ಮಂಡಳಿ ಖರ್ಚು ಮಾಡಿದ ಹಣ ಎಷ್ಟು? ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು? ಪ್ರತಿ ಮನೆಗಳ ಅಂದಾಜು ವೆಚ್ಚ ಎಷ್ಟು?

ಆ) ಗ್ರಾಮೀಣ ಪ್ರದೇಶಗಳ ಜನರಿಗಾಗಿ ಕಳೆದ 3 ವರ್ಷಗಳಲ್ಲಿ ಸರ್ಕಾರ ಖರ್ಚು ಮಾಡಿರುವ ಹಣ ಎಷ್ಟು? ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು?

ಇ) ಕೊಳಚೆ ನಿರ್ಮೂಲನಾ ಮಂಡಳಿಯ ಹಾಗೂ ಗ್ರಾಮೀಣ ಪ್ರದೇಶದ ಮನೆಗಳಿಗೆ ತಗಲುವ ವೆಚ್ಚದಲ್ಲಿ ತುಂಬಾ ವ್ಯತ್ಯಾಸವಿದ್ದರೆ ಅದನ್ನು ಸರಿಪಡಿಸಲು ಸರ್ಕಾರ ಏನು ಕಾರ್ಯಕ್ರಮ ಹಮ್ಮಿಕೊಂಡಿದೆ?

ಈ) ಕರ್ನಾಟಕ ವಿದ್ಯುಚ್ಛಕ್ತಿ ಕಾರ್ಖಾನೆ ಘಟಕದ ಪಕ್ಕದಲ್ಲಿ ದುಂದು ವೆಚ್ಚದಲ್ಲಿ ಕೊಳಚೆ ಪ್ರದೇಶದ ಜನರಿಗೆ ಮನೆಗಳನ್ನು ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಉ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಖಿಮರುಲ್ ಇಸ್ಲಾಂ (ವಸತಿ ಇಲಾಖೆ):

ಅ) ಕೊಳಚೆ ನಿರ್ಮೂಲನಾ ಮಂಡಳಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದ ಅನುದಾನದಿಂದ ಖರ್ಚು ಮಾಡಿದ ಹಣದ ವಿವರ, ಕಟ್ಟಿರುವ ಮನೆಗಳ ಸಂಖ್ಯೆ ಈ ಕೆಳಗಿನಂತಿರುತ್ತದೆ.

ಕ್ರ. ಸಂ.	ವರ್ಷ	ಕಟ್ಟಿರುವ ಮನೆಗಳು	ಖರ್ಚಾದ ಹಣ (ಲಕ್ಷ ರೂ.ಗಳಲ್ಲಿ)
1.	1997-98	2013	850-00